**QP Code: 9802**

**(3 Hours)**

**[Total Marks: 100**

**N.B. :** Figures to the right indicate Full Marks.

## Section-I

40

1. ಕವಿರಾಜಮಾರ್ಗದ ಆಕರವಾದ ಸಂಸ□ತ ಗ್ರಂಥ
   (೧) ಕಾವ್ಯದರ್ಪಣ (೨) ನಾಟ್ಯಶಾಸ್ತ್ರ (೩) ಸಾಹಿತ್ಯದರ್ಪಣ (೪) ಕಾವ್ಯಪ್ರಕಾಶ.

2. ವಡ್ಡಾರಾಧನೆಯಲ್ಲಿರುವ ಒಟ್ಟು ಕಥೆಗಳ ಸಂಖ್ಯೆ.
   (೧) ೧೯ (೨) ೨೪ (೩) ೩೫ (೪) ೬೪

3. ಹಲ್ಮಿಡಿ ಶಾಸನಕ್ಕೆ ಕಾರಣವಾದ ರಾಜಮನೆತನ
   (೧) ಗಂಗ (೨) ರಾಷ್ಟ್ರಕೂಟರು (೩) ಕದಂಬ (೪) ಚಾಲುಕ್ಯ

4. ಕನ್ನಡದ ಮೊದಲ ತ್ರಿಪದಿ ಕಾಣಿಸಿದ ಶಾಸನ.
   (೧) ಗಂಗಾಧರಂ ಶಾಸನ (೨) ಕಪ್ಪೆ ಅರಭಟ್ಟ (೩) ಅತ್ತಿಮಬ್ಬೆ (೪) ತಾಳಗುಂದ.

5. ಪಂಪನ ಆದಿಪುರಾಣಕ್ಕೆ ಆಕರವಾದ ಸಂಸ□ತ ಗ್ರಂಥ
   (೧) ಬೃಹತ್ ಕಥಾಕೋಶ (೨) ಪಂಚತಂತ್ರ (೩) ತ್ರಿಷಷೋಶಲಾಣ ಪುರಾಣ (೪) ಪೂರ್ವಪುರಾಣ

6. ಕವಿ ಚಕ್ರವರ್ತಿಗಳಲ್ಲಿ ಒಬ್ಬ
   (೧) ಪೊನ್ನ (೨) ಪಂಪ (೩) ನೇಮಿಚಂದ್ರ (೪) ನಾಗಚಂದ್ರ.

7. ಕನ್ನಡದ ದ್ವಿತೀಯ ಗದ್ಯಕೃತಿ
   (೧) ವಡ್ಡರಾಧನೆ (೨) ಪಂಚತಂತ್ರ (೩) ಮುದ್ರಾಮಂಜೂಷ (೪) ಚಾವುಂಡರಾಯಪುರಾಣ.

8. ಕನ್ನಡದ ಮೊದಲ ವ್ಯಾಕರಣ ಕೃತಿ
   (೧) ಶಬ್ದಸ್ಮೃತಿ (೨) ಶಬ್ದಮಣಿದರ್ಪಣ (೩) ರನ್ನಕಂದ (೪) ನಡುಗನ್ನಡದ ನುಡಿಕನ್ನಡಿ

9. ಉದಾತ್ತರಾವಣನನ್ನು ಚಿತ್ರಿಸಿದ ಕವಿ
   (೧) ಕುಮುಂದೇಂದ್ರ (೨) ಕುಮಾರ ವಾಲ್ಮೀಕಿ (೩) ಮುದ್ದಣ್ಣ (೪) ನಾಗಚಂದ್ರ.

10. ಕಾನಡಿ ವಿಠಲ ಎಂದು ಕರೆದ ಮರಾಠಿ ಕವಿ.
    (೧) ಏಕನಾಥ (೨) ತುಕಾರಾಮ (೩) ಸಂತ ರಾಮದಾಸ (೪) ಜ್ಞಾನೇಶ್ವರ.

11. 'ಪೊಲ್ಲಮೆಯೆ ಲೇಸು ಸಲ್ಲದ ಮೆಯ್ಯೋಳ್- ಯಾವ ಕಾವ್ಯದ ಮಾತು
    (೧) ಅನಂತನಾಥ ಪುರಾಣ (೨)ಯಶೋಧರ ಚರಿತೆ (೩)ಜೀವಂಧರಚರಿತೆ (೪)ಸಮಯ ಪರೀಕ್ಷೆ.

[Turn Over

3BB7988552D430087D4993C39A216E68

12. ಮರುಳುಗಳ ಪ್ರಸಂಗವನ್ನು ಹೊಂದಿರುವ ಕನ್ನಡ ಕಾವ್ಯ
(೧) ಶಾಂತಿಪುರಾಣ (೨) ಅಜಿತಪುರಾಣ (೩) ಸಾಹಸಭೀಮ ವಿಜಯಂ(೪)ಭುವನೇಂದ್ರ ವಿಜಯಂ.

13. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯ್ತು- ವಚನಕಾರ ಯಾರು?
(೧) ಶಂಕರದಾಸಿಮಯ್ಯ (೨) ಅಲ್ಲಮಪ್ರಭು (೩)ದೇವರದಾಸಿಮಯ್ಯ (೪)ಹಡಪದ ಅಪ್ಪಣ್ಣ.

14. ಈಸಕ್ಕಿಯಾಸೆ ನಿನಗೇಕೆ: ವಚನ
(೧) ಅಕ್ಕಮಹಾದೇವಿ (೨) ಮುಕ್ತಾಯಕ್ಕ (೩) ಸೂಳೆ ಸಂಕವ್ವ (೪) ಆಯ್ದಕ್ಕಿ ಲಕ್ಕಮ್ಮ.

15. ಏಕಲವ್ಯ ನಾಟಕವನ್ನು ಬರೆದವರು
(೧) ಗೋವಿಂದ ಪೈ (೨) ಕುವೆಂಪು (೩) ಕೈಲಾಸಂ (೪) ಶ್ರೀರಂಗ.

16. ಹರಿಜನವಾರ ನಾಟಕದ ಕರ್ತೃ:
(೧) ಎಚ್.ಎಸ್. ಶಿವಪ್ರಕಾಶ (೨)ಜಿ.ಬಿ.ಜೋಶಿ (೩) ಮಾಸ್ತಿ (೪) ಶ್ರೀರಂಗ

17. ನಾದಲೀಲೆ ಕವಿತಾ ಸಂಕಲನದ ಕರ್ತೃ
(೧) ಕುವೆಂಪು (೨) ಪುತಿನ (೩) ವೀಸೀ (೪) ದ.ರಾ.ಬೇಂದ್ರೆ.

18. ಕಾಡಿನಕೊಳಲಿದು ಎಂದು ಹಾಡಿದ ಕವಿ:
(೧) ಕಡಂಗೋಡ್ಲು ಶಂಕರಭಟ್ಟ (೨)ಪಂಜೆಮಂಗೇಶರಾಯರು (೩)ಮಾಸ್ತಿ (೪)ಕುವೆಂಪು.

19. ಇಂದಿರಾಬಾಯಿ ಕಾದಂಬರಿ ಬರೆದವರು.
(೧)ಎಂ.ಎಸ್.ಪುಟ್ಟಣ್ಣ (೨) ಗಳಗನಾಥ (೩)ಗುಲ್ವಾಡಿ ವೆಂಕಟರಾಯರು (೪) ಶಿವರಾಮಕಾರಂತ.

20. ಸಕಲಲಕ್ಷಣಂ ವಸ್ತುಕತೆ ವಶದರಕ್ಷಣೆಯು ವಿಫಲವಾಗುವುದು ದೋಷವಿಲ್ಲ- ಹಾಡಿದ ಕವಿ
(೧) ರತ್ನಾಕರವರ್ಣಿ (೨) ಚಿಕುಪಾಧ್ಯಯ(೩) ಅಭಿನವ ಮಂಗರಸ (೪)ನಾಗವರ್ಮ.

21. ಸಾಲವನು ಕೊಂಬಾಗ ಹಾಲೋಗರು ಉಂಡಂತೆ ಎಂದು ಹೇಳಿದ ಕವಿ.
(೧)ಮುಪ್ಪಿನ ಷಡಕ್ಷರಿ (೨) ನಿಜಗುಣಶಿವಯೋಗಿ (೩) ಸರ್ವಜ್ಞ (೪) ಕನಕದಾಸ.

22. ಇದು ೧೭ನೇಯ ಶತಮಾನದ ಚಂಪೂ ಕಾವ್ಯ
(೧) ಅನುಭವಾಮೃತ (೨)ತತ್ವಾವಲೋಕನ (೩)ರಾಜಶೇಖರ ವಿಳಾಸ (೪) ಭಾವಚಿಂತಾರತ್ನ.

[Turn Over

23. ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವಿರಿ ಎಂದು ಹಾಡಿದ ಕವಿಯತ್ರಿ
(೧) ತಿರುಮಲಾಂಬ (೨) ಹಳವನಕಟ್ಟೆ ಗಿರಿಯಮ್ಮ (೩)ಭೀಮವ್ವ (೪)ಸಂಚಿಯ ಹೊನ್ನಮ್ಮ

24. ನೀರಿಳಿಯದ ಗಂಟಲೋಳ್ ಕಡುಬಂ ತುರಿಕಿದಂತಾಯ್ತು ಇದು ಯಾವ ಕಾವ್ಯದ ಸಾಲು
(೧) ಶ್ರೀರಾಮಪಟ್ಟಾಭಿಷೇಕ (೨)ಅದ್ಭುತರಾಮಾಯಣ (೩)ಶ್ರೀರಾಮಶ್ವಮೇದ (೪) ಶ್ರೀರಾಮಾನ್ವೇಷಣಂ.

25. ಮೊದಲ ಘಟ್ಟದ ಕನ್ನಡದ ಕಾದಂಬರಿ
(೧) ಮಾಡಿದ್ದುಣ್ಣೋ ಮಹಾರಾಯ (೨)ಕನ್ಯಾಬಲಿ (೩) ಶೇಷಮ್ಮ (೪) ಮಾಡಿ ಮಡಿದವರು.

26. ಕಮಲಾಪುರದ ಹೊಟೆಲಿನಲ್ಲಿ- ಕಥೆಯ ಲೇಖಕರು
(೧)ಕಡಂಗೋಡ್ಲು ಶಂಕರಭಟ್ (೨)ಬೆಣಗಲ್ ರಾಮರಾವ್
(೩) ಎಂ.ಎನ್.ಕಾಮತ್ (೪)ಪಂಜೆಮಂಗೇಶರಾಯರು

27. ಸಣ್ಣಕಥೆಗಳ ಜನಕ
(೧)ಕೃಷ್ಣಶಾಸ್ತ್ರಿಗಳು (೨)ಶಂಭಾಜೋಶಿ (೩)ಗೋವಿಂದರಾಯರು (೪) ಮಾಸ್ತಿ

28. ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ ಬರೆದವರು
(೧) ಕೈಲಾಸಂ (೨) ಶ್ರೀರಂಗ (೩) ಸಿಂಗರಾರ್‍ಯ (೪)ಸೂರ್‍ಯಿ ವೆಂಕಟರಮಣ ಶಾಸ್ತ್ರಿ

29. ಬೇಡಲು ಕನ್ನಡದಾಸಯ್ಯ ಬಂದಿಯಾ- ಹಾಡಿದ ಕವಿ
(೧)ನರಸಿಂಹ ಆಚಾರ್ಯ (೨) ಶಾಂತಕವಿ (೩)ಪಾಂಡೇಶ್ವರ ಗಣಪತಿರಾವ್ (೪)ಪು.ತಿ.ನ.

30. ಕನ್ನಡ ಮಾತು ತಲೆಯೆತ್ತುವ ಬಗೆ- ಉಪನ್ಯಾಸದಿಂದ ಪ್ರಸಿದ್ಧರಾದವು.
(೧)ಆಲೂರು ವೆಂಕಟರಾಯರು (೨)ದ.ರಾ.ಬೇಂದ್ರೆ (೩) ಟಿ.ಎಸ್.ವೆಂಕಣ್ಣಯ್ಯ
(೪) ಬಿ.ಎಂ.ಶ್ರೀ.

31. ಟೊಳ್ಳುಗಟ್ಟಿ ನಾಟಕದ ಕರ್‍ತೃ
(೧)ಅನಕೃ (೨) ತರಾಸು (೩) ಕೈಲಾಸಂ (೪)ಶ್ರೀರಂಗ

32. ಹೆಂಡ್ಕುಡುಕನ ಪದಗಳು ಬರೆದ ಕವಿ
(೧)ಪೇಜಾವರಸದಾಶಿವರಾವ್ (೨)ಸುರಂ ಎಕ್ಕುಂಡಿ (೩)ಅರವಿಂದ ನಾಡಕರ್ಣಿ (೪)ಜಿಪಿ.ರಾಜರತ್ನಂ.

33. ಇವರು ಒಬ್ಬ ಪ್ರಗತಿಶೀಲ ಲೇಖಕರು
(೧)ಕೇರೂರುವಾಸುದೇವ ಆಚರ್ಯ (೨) ಬಿ.ಎಚ್.ಶ್ರೀಧರ
(೩) ವಿ.ಕೃ.ಗೋಕಾಕ (೪)ನಿರಂಜನ.

[Turn Over

34. ಸದ್ಗುಣಿ ಕೃಷ್ಣಬಾಯಿ ಕಾದಂಬರಿ ಬರೆದ ಲೇಖಕಿ
(೧)ತಿರುಮಲಾಂಬ (೨) ಶ್ಯಾಮಲ (೩)ಶಾಂತಾಬಾಯಿ ನಿಲಗಾರ (೪) ಕಲ್ಯಾಣ ಸರಸ್ವತಿ.

35. ಕನ್ನಡದ ಒಬ್ಬ ಸಂಶೋಧಕರು
(೧) ಶಂಬಾ ಜೋಶಿ (೨)ಜಿ.ಬಿ.ಜೋಶಿ (೩) ಸಂಸ (೪) ಮೋಹರೆ ಹಣಮಂತರಾಯರು

36. ಇದು ಕನ್ನಡದ ಒಂದು ವಿಮರ್ಶಾ ಕೃತಿ
(೧) ತೆರೆದ ಮನ (೨) ಅಮೃತ ಮತ್ತು ಗರುಡ (೩)ನನ್ನ ನಲ್ಲ (೪)ಸಂಸ್ಕಾರ.

37. ಅಮೆರಿಕದಲ್ಲಿ ಗೋರೂರು- ಯಾವ ಪ್ರಕಾರದ ಕೃತಿ.
(೧) ಕಾದಂಬರಿ (೨) ಸಣ್ಣಕಥೆ (೩) ಸಂಶೋಧನೆ (೪) ಪ್ರವಾಸಕಥನ.

38. ಸಖಿಗೀತೆಯ ಕವಿ
(೧) ಕೆ.ಎಸ್.ನ (೨) ತಿನಂಶ್ರೀ (೩) ಸುಮತೀಂದ್ರ ನಾಡಿಗ (೪) ದ.ರಾ.ಬೇಂದ್ರೆ

39. ಜೋಕುಮರ ಸ್ವಾಮಿ ನಾಟಕದ ಕರ್ತೃ
(೧) ಶಿವಪ್ರಕಾಶ (೨) ಪರ್ವತವಾಣಿ (೩) ಕೆ.ವಿ.ಸುಬ್ಬಣ್ಣ (೪) ಚಂದ್ರಶೇಖರ ಕಂಬಾರ.

40. ಇದು ಕನ್ನಡದ ಮೊದಲ ಆತ್ಮಕಥೆ:
(೧)ಹುಳಿ ಮಾವಿನ ಮರ(೨)ಸಂಜೆಗಣ್ಣಿನ ಹಿನ್ನೋಟ (೩)ಊರುಕೇರಿ (೪)ನೆನಪಿನ ದೋಣಿಯಲ್ಲಿ.

## Section-II

2. **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. 30
೧. ಖ್ಯಾತ ಕರ್ನಾಟಕ ವೃತ್ತಗಳನ್ನು ಹೆಸರಿಸಿ. ಅವುಗಳ ಲಕ್ಷಣಗಳನ್ನು ವಿವರಿಸಿ
೨. ರಸಸಿದ್ಧಾಂತವನ್ನು ವಿಶ್ಲೇಷಿಸಿರಿ.
೩. ಸಂಸ□ತಿ ಕುರಿತ ವಿವಿಧ ವ್ಯಾಖ್ಯಾನಗಳನ್ನು ಕ್ರೋಡಿಕರಿಸಿ ಚರ್ಚಿಸಿರಿ.
೪. ಸಾಹಿತ್ಯ ಸಂಶೋಧನೆಯ ವಿವಿಧ ಮಾದರಿಗಳನ್ನು ಚರ್ಚಿಸಿರಿ.
೫. ಪ್ರಾಚೀನ ಕರ್ನಾಟಕದ ಶಿಕ್ಷಣ ಪರಂಪರೆಯನ್ನು ಕುರಿತು ಬರೆಯಿರಿ.

## Section-III

3. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 30
(೧)ಕನ್ನಡ ಭಾಷೆಯ ಅವಸ್ಥಾಭೇದಗಳನ್ನು ಸಾಧಾರವಾಗಿ ಚರ್ಚಿಸಿರಿ.
(೨) ದಲಿತ ಪರಿಕಲ್ಪನೆಯ ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ವಿವರಿಸಿರಿ.
(೩) ಮುಂಬಯಿ ಕನ್ನಡ ಕಾವ್ಯದ ವಿಕಾಸವನ್ನು ಕುರಿತು ಬರೆಯಿರಿ
(೪) ಮುಂಬಯಿಯಲ್ಲಿ ಕನ್ನಡ ಸಂಶೋದನೆಯ ಸ್ವರೂಪವನ್ನು ವಿವೇಚಿಸಿರಿ.

----------